ವಿಚಾರದಲ್ಲಿ, ಅನೇಕ ಸಲ ಇಷ್ಟು ದಿವಸ ಎಂದು ನಾನೇ ನಿಗದಿ ಮಾಡುತ್ತೇನೆ. ನಿಮ್ಮ ಭಾವನೆ ನನಗೂ ಅರ್ಥವಾಯಿತು. ನಾನು ಅನಂತರ, ಉಪ ಮುಖ್ಯಮಂತ್ರಿಗಳು ಹಾಗೂ ಹಣಕಾಸಿನ ಆಯುಕ್ತರ ಜೊತೆ ಮಾತನಾಡುತ್ತೇನೆ.

ವಿಷಯ:- ಮಂಗಳೂರು ಮಹಾನಗರ ಪಾಲಿಕೆಯ ಚುನಾವಣೆ.

17(222)

ಶ್ರೀ ಕೆ. ಜಯರಾಮ ಶೆಟ್ಟಿ (ಉಳ್ಳಾಲ):- ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) ಮಂಗಳೂರು ಮಹಾನಗರಪಾಲಿಕೆಗೆ ಚುನಾವಣೆಯನ್ನು ಯಾವಾಗ ನಡೆಸಲಾಗುವುದು;

ಆ) ಚುನಾಯಿತ ನಗರಪಾಲಿಕೆ ಅಸ್ತಿತ್ವದಲ್ಲಿ ಇಲ್ಲದೇ ಇರುವುದರಿಂದ ಕುಡಿಯುವ ನೀರು, ರಸ್ತೆ, ಒಳಚರಂಡಿ ಮುಂತಾದ ಕನಿಷ್ಟ ಸೌಲಭ್ಯಗಳಿಂದ ಸಾರ್ವಜನಿಕರು ವಂಚಿತರಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಮಿರಾಜುದ್ದೀನ ಎಸ್. ಪಾಟೀಲ್ (ಪೌರಾಡಳಿತ ರಾಜ್ಯ ಸಚಿವರು):-

ಅ) ಆದಷ್ಟು ಶೀಘ್ರವಾಗಿ.

ಆ) ಇಲ್ಲ.

ಶ್ರೀ ಕೆ. ಜಯರಾಮಶೆಟ್ಟಿ:- ಸನ್ಮಾನ್ಯ ಅಧ್ಯಕ್ಷರೇ, ಮಂಗಳೂರು ಮಹಾನಗರ ಪಾಲಿಕೆಗೆ ಚುನಾವಣೆಯನ್ನು ಯಾವಾಗ ನಡೆಸುತ್ತೀರಿ ಎಂದು ಕೇಳಿದ್ದಕ್ಕೆ ಮಂತ್ರಿಗಳು ಉತ್ತರವನ್ನು ಕೊಟ್ಟು, ಅತಿ ಶೀಘ್ರವಾಗಿ ಎಂದು ಹೇಳಿದ್ದಾರೆ. ಮಂಗಳೂರು ಮಹಾನಗರ ಪಾಲಿಕೆಗೆ ಈಗಾಗಲೇ ಮೂರು ಸಲ ದಿನವನ್ನು ನಿಶ್ಚಯ ಮಾಡಿಕೊಂಡಿದ್ದರು. ಈ ಸರ್ಕಾರಕ್ಕೆ ಮಳೆಗಾಲ ಯಾವಾಗ, ಚಳಿಗಾಲ ಯಾವಾಗ, ಬೇಸಿಗೆ ಕಾಲ ಯಾವಾಗ ಎಂದು ಗೊತ್ತಾಗುತ್ತ ಇಲ್ಲ. ಕಳೆದ ಸಲ ಜೂನ್‌ನಲ್ಲಿ ನಾಮಿನೇಷನ್ಸ್ ತೆಗೆದುಕೊಂಡಿದ್ದರು. ಕಡೆಗೆ ಮಳೆಗಾಲ ಎಂದು, ಅದನ್ನು ಮುಂದುವರಿಸಿದರು. ಈಗ ಪುನಃ ಶೀಘ್ರವಾಗಿ ಎಂದು ಹೇಳುತ್ತಿದ್ದಾರೆ. ಯಾವ ತಾರೀಖಿಗೆ ಚುನಾವಣೆಯನ್ನು ನಡೆಸುತ್ತಾ ಇದ್ದೀರಿ ಎಂಬ ಬಗ್ಗೆ ತಾವು ನನಗೆ ನಿರ್ದಿಷ್ಟವಾಗಿ ಉತ್ತರವನ್ನು ಕೊಡಬೆಕು. ಶ್ರೀಘ್ರ ಎಂದು ಹೇಳಿದರೆ ಹೇಗೆ? ಮತ್ತೆ ಮಂಗಳೂರು ಮಹಾನಗರ ಪಾಲಿಕೆಯಲ್ಲಿ, ಹೊಸದಾಗಿ ಏನು ವ್ಯತ್ಯಾಸ ಮಾಡಿಕೊಂಡಿದ್ದೀರಿ. ಮುಂಚೆ ಅಲ್ಲಿ 65 ಡಿವಿಜನ್ ಇತ್ತು, ಯಾವುದನ್ನು ಬಿಟ್ಟಿದ್ದೀರಿ, ಯಾವುದನ್ನು ತೆಗೆದುಕೊಂಡಿದ್ದೀರಿ, ಯಾವ ಯಾವ ಕ್ಷೇತ್ರಗಳನ್ನು ಹೆಚ್ಚುವರಿಯಾಗಿ ತೆಗೆದುಕೊಂಡಿದ್ದೀರಿ, ಬದಲಾವಣೆ ಮಾಡಿಕೊಳ್ಳುತ್ತಾ ಇದ್ದೀರಿ. ಯಾವ ರೀತಿ ರೂಪರೇಖೆ ಮಾಡಿದ್ದೀರಿ ಎಂಬುದನ್ನು ನಮಗೆ ತಿಳಿಸಬೇಕೆಂದು ವಿನಂತಿ ಮಾಡುತ್ತೇನೆ.

ಅಧ್ಯಕ್ಷರು:- ನೀವು ದಕ್ಷಿಣ ಕನ್ನಡ ಜಿಲ್ಲೆಯವರು, ಅವರು ಬೀದರ್‌ನವರು. ನೀವು ಸ್ವಲ್ಪ ನಿಧಾನಕ್ಕೆ ಮಾತನಾಡಿದರು, ನಿಮ್ಮ ಕನ್ನಡ ಅವರಿಗೆ ಅರ್ಥವಾಗುತ್ತದೆ. ಇಲ್ಲದೇಹೋದರೆ, ನಾನು ತರ್ಜುಮೆ ಮಾಡಬೇಕಾಗುತ್ತದೆ.

ಶ್ರೀ ಆರ್.ವಿ. ದೇಶಪಾಂಡೆ:- ಸದಸ್ಯರು, ಚುನಾವಣೆಯನ್ನು ಯಾವಾಗ ಮಾಡುತ್ತೀರಿ ಎಂದು ಕೇಳಿದರೆ ಹೇಳಬಹುದು. ಅವರು ಡಿವಿಜನ್ ವಿಷಯಗಳನ್ನೆಲ್ಲಾ ಕೇಳುತ್ತಿದ್ದಾರೆ, ಡೀಲಿಮಿಟೇಷನ್ ವಿಷಯಗಳನ್ನೆಲ್ಲಾ ಕೇಳುತ್ತಿದ್ದಾರೆ. ಇದಕ್ಕೆಲಾ ಉತ್ತರವನ್ನು ಹೇಳಲು ಕಷ್ಟವಾಗುತ್ತದೆ.

ಅಧ್ಯಕ್ಷರು:- ನೀವು ಅವರಿಗೆ ಗೈಡ್ ಮಾಡಿ, ಅದಕ್ಕೆ ಪ್ರತ್ಯೇಕ ನೋಟೀಸ್ ಕಳುಹಿಸಿಕೊಡಲಿ.

ಶ್ರೀ ಕೆ. ಜಯರಾಮಶೆಟ್ಟಿ:- ಮಂಗಳೂರು ಮಹಾನಗರಪಾಲಿಕೆಯ ಚುನಾವಣೆಯನ್ನು ಯಾವ ತಾರೀಖು ನಡೆಸುತ್ತೀರಿ ಎನ್ನುವುದನ್ನು ಸ್ಪಷ್ಟವಾಗಿ ಹೇಳಿ?

ಶ್ರೀ ಮಿರಾಜುದ್ದೀನ್ ಎನ್. ಪಟೇಲ್:- ಮಾನ್ಯ ಅಧ್ಯಕ್ಷರೇ ಮಂಗಳೂರು ಮಹಾನಗರ ಪಾಲಿಕೆ ಚುನಾವಣೆಯನ್ನು ಸೆಪ್ಟೆಂಬರ್ ತಿಂಗಳಲ್ಲಿ ಮಾಡಬೇಕೆಂದು ಸರ್ಕಾರ ಎಲ್ಲಾ ರೆಡಿ ಮಾಡಿಕೊಂಡಿತ್ತು. ಆಗ ಅಲ್ಲಿನ ಎಲ್ಲಾ ಪಕ್ಷದವರು ಸೇರಿ ಈಗ ಏನು ಡೀಲಿಮಿಟೇಶನ್ಸ್ ಮಾಡಿದ್ದಾರೆ ಅದು ಸರಿಯಾಗಿಲ್ಲ ಎಂದರು ಅದಕ್ಕೆ ಪುನಃ ಡೀಲಿಮಿಟೇಷನ್ಸ್ ಮಾಡಿ ಏರಿಯಾ ಫಿಕ್ಸ್ ಮಾಡಿ ಆದಷ್ಟು ಬೇಗ ಚುನಾವಣೆಯನ್ನು ಮಾಡುತ್ತೇವೆ.

ಶ್ರೀ ಕೆ. ಜಯರಾಮಶೆಟ್ಟಿ:- ಮಾನ್ಯ ಅಧ್ಯಕ್ಷರೆ, ಇಡೀ ಕರ್ನಾಟಕ ರಾಜ್ಯದಲ್ಲಿ ಮಹಾನಗರಗಳ ಚುನಾವಣೆಗಳಲ್ಲಿ ಬಾಕಿ ಇರುವುದು ಮಂಗಳೂರು ಮಹಾನಗರಪಾಲಿಕೆ ಮಾತ್ರ. ಆದರೆ ಸರ್ಕಾರ ಇದಕ್ಕೆ ಕಾರಣ ಕೊಡುವುದು ಏನೆಂದರೆ ಎಲ್ಲಾ ರಾಜಕೀಯ ಪಕ್ಷಗಳು ಡೀ ಲಿಮಿಟೇಷನ್ಸ್ ಸರಿಯಾಗಿ ಆಗಿಲ್ಲ ಎಂದು ಹೇಳಿದವು ಅದಕ್ಕೆ ನಾವು ಚುನಾವಣೆಯನ್ನು ಮುಂದಕ್ಕೆ ಹಾಕಿದೆವು ಎಂದು. ಆದರೆ ಉಡುಪಿಯಲ್ಲಿ ಸಹ ಉಡುಪಿ ಪುರಸಭೆಗೆ ಚುನಾವಣೆ ಮಾಡಲು ಎಲ್ಲಾ ಪಕ್ಷಗಳ ವಿರೋಧ ಇದ್ದರೂ ಸಹ ಅಲ್ಲಿ ಸರ್ಕಾರ ಚುನಾವಣೆ ಮಾಡಿತು. ಆದರೆ ಮಂಗಳೂರು ಮಹಾನಗರಪಾಲಿಕೆ ಚುನಾವಣೆಯನ್ನು ಮಾಡಲು ತಮಗೆ ಏನು ಕಷ್ಟ?

ಶ್ರೀ ಬಿ.ಎ. ಮೊಯ್ದೀನ್:- ಚುನಾವಣೆಯನ್ನು ಮುಂದೂಡುವ ಬಗ್ಗೆ ಎಲ್ಲಾ ರಾಜಕೀಯ ಪಕ್ಷಗಳು ರಿಕ್ವೆಸ್ಟ್ ಮಾಡಿದ್ದವು.

ಅಧ್ಯಕ್ಷರು:- ತಮ್ಮ ಪಕ್ಷದವರೂ ಕೇಳಿದ್ದರಾ ಜಯರಾಮಶೆಟ್ಟರೇ?

ಶ್ರೀ ಕೆ. ಜಯರಾಮಶೆಟ್ಟಿ:- ನಾವು ಕೇಳಿರಲಿಲ್ಲ.

ಶ್ರೀ ಬಿ.ಎ. ಮೊಯ್ದೀನ್:- ಎಲ್ಲಾ ರಾಜಕೀಯ ಪಕ್ಷದವರು ಕುಳಿತು ಕೂಲಂಕಷವಾಗಿ ಚರ್ಚೆ ಮಾಡಿದ್ದೇವೆ. ಅದು ಅವರಿಗೂ ಗೊತ್ತಿದೆ. ಆದರೆ ಈ ಮನೆಯ ಸದಸ್ಯರಿಗೆ ತಮಗೆ ವಿಷಯ ಗೊತ್ತಾಗಲಿ ಎಂದು ಅವರು ಪ್ರಶ್ನೆಯನ್ನು ಕೇಳುತ್ತಿದ್ದಾರೆ.

ಶ್ರೀ ಕುಂಬ್ಳೆ ಸುಂದರರಾವ್:- ನಾವು ಈ ರಾಜ್ಯದ ಜನತೆಯ ಗಮನ ಸೆಳೆಯುತ್ತಿದ್ದೇವೆ. ಮತ್ತು ಸರ್ಕಾರದ ಗಮನ ಸೆಳೆಯುತ್ತಿದ್ದೇವೆ.

ಶ್ರೀ ಬಿ.ಎ. ಮೊಯಿಯುದ್ದೀನ್:- ಈ ವಿಷಯ ಶ್ರೀ ವಾಟಾಳ್ ನಾಗರಾಜ್ ರಂತಹ ಸದಸ್ಯರಿಗೆ ಗೊತ್ತಾಗಲಿ ಎಂದು ಪ್ರಸ್ತಾಪ ಮಾಡುತ್ತಿದ್ದಾರೆ. ಈ ವಿಷಯ ಚರ್ಚೆ ಮಾಡಿದಾಗ ನಾವು ಅವರು ಒಂದಾಗಿದ್ದೆವು.

ಶ್ರೀ ಕೆ.ಎಸ್. ಈಶ್ವರಪ್ಪ:- ನಾವು ಅವರು ಒಂದಾಗಿಲ್ಲ.

ಶ್ರೀ ವಾಟಾಳ್ ನಾಗರಾಜ್:- ನಾವು ಅವರು ಒಂದಾಗಿದ್ದೆವು ಎಂದು ಅವರೇ ಹೇಳುತ್ತಿದ್ದಾರೆ.

ಶ್ರೀ ಕೆ.ಎಸ್. ಈಶ್ವರಪ್ಪ:- ನಾವು ಒಂದಾಗಿಲ್ಲ. ಬೇಕಾದರೆ ಅವರು ತಾವು ಒಂದಾಗಿ.

ಶ್ರೀ ವಾಟಾಳ್ ನಾಗರಾಜ್:- ಅವರು ಹೇಳುತ್ತಿರುವುದು ನಮ್ಮ ಜಿಲ್ಲೆಯ ಶಾಸಕರು ನಾವೆಲ್ಲ ಒಂದಾಗಿದ್ದೇವೆ ಎಂದು ಅದಕ್ಕೆ ತಾವು ಏಕೆ ಇಷ್ಟು ಕೋಪ ಮಾಡಿಕೊಳ್ಳುತ್ತೀರಿ?

ಶ್ರೀ ಬಿ.ಎ. ಮೊಯ್ದೀನ್:- ಅಭಿವೃದ್ಧಿ ದೃಷ್ಟಿಯಿಂದ ನಾವೆಲ್ಲಾ ಒಂದಾಗಿದ್ದೆವು.

ಶ್ರೀ ವಾಟಾಳ್ ನಾಗರಾಜ್:- ನಾನು ಅವರು ಹೇಳಿದ್ದನ್ನು ಹೇಳಿದ್ದೇನೆ ತಾವು ಏಕೆ ಇಷ್ಟು ಸಿಟ್ಟು ಮಾಡಿಕೊಳ್ಳುತ್ತೀರಿ? ತಮ್ಮ ಮತ್ತು ಅವರ ತತ್ವ ಸಿದ್ಧಾಂತ ಎಲ್ಲಾ ಒಂದೇ ತಾವು ಒಂದಾದರೂ ಪರವಾಗಿಲ್ಲ ಬಿಡಿ. ನಮಗೆಲ್ಲಾ ಗೊತ್ತಿದೆ.

ಅಧ್ಯಕ್ಷರು:- ಚುನಾವಣೆ ವಿಷಯವಾಗಿ ಮಾನ್ಯ ಮಂತ್ರಿಗಳು ಸ್ಪಷ್ಟವಾಗಿ ಹೇಳಿದ್ದಾರೆ. ಎಲ್ಲಾ ರಾಜಕೀಯ ಪಕ್ಷಗಳಿಂದ ತಮಗೆ ಒತ್ತಾಯ ಬಂದಿದ್ದರಿಂದ ತಾವು ಚುನಾವಣೆಯನ್ನು ಮುಂದೂಡಿದ್ದೀರಿ ಮತ್ತು ಲೋಪದೋಷಗಳು ಇದ್ದಿದ್ದರಿಂದ ಎಲ್ಲಾ ಪಕ್ಷಗಳು ಆ ಲೋಪ ದೋಷಗಳನ್ನು ಸರಿ ಮಾಡಿ ಎಂದು ಒತ್ತಾಯ ಮಾಡಿದ್ದರಿಂದ ಅವರ ಒತ್ತಾಯದ ಆಧಾರದ ಮೇಲೆ ಮಾಡಿದ್ದೀರಿ. ಈಗ ಡೀಲಿಮಿಟೇಶನ್ಸ್ ಸರಿ ಮಾಡುವ ಕೆಲಸ ಮಾಡುತ್ತಿದ್ದೀರಿ. ಅದು ಮುಗಿದ ತಕ್ಷಣ ಆದಷ್ಟು ಬೇಗ ಮಾಡುತ್ತೇನೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಬಹುಶಃ ಫೆಬ್ರವರಿ ತಿಂಗಳು ಮುಗಿದ ಮೇಲೆ ಅಲ್ಲಿ ಮತ್ತೆ ಮಳೆಗಾಲ ಶುರುವಾಗುತ್ತದೆ. ಆಗ ಚುನಾವಣೆ ಮಾಡಲು ಅನಾನುಕೂಲವಾಗುತ್ತದೆಂದು ಕೆಲವು ಶಾಸಕರ ಅಭಿಪ್ರಾಯ. ಆದ್ದರಿಂದ ಮಳೆಗಾಲ ಶುರುವಾಗುವುದಕ್ಕಿಂತ ಮುಂಚಿತವಾಗಿ ಚುನಾವಣೆ ಮಾಡಿದರೆ ಅನುಕೂಲ.

ಶ್ರೀ ಡಿ.ವಿ. ಸದಾನಂದ ಗೌಡ:- ಮಾನ್ಯ ಅಧ್ಯಕ್ಷರೇ, ಉಡುಪಿ ಪುರಸಭೆಯ ಚುನಾವಣೆಯನ್ನು ಮುಂದೂಡಿ ಎಂದು ಒತ್ತಾಯ ಇದ್ದರೂ ಸಹ ಅಲ್ಲಿ ಚುನಾವಣೆಯನ್ನು ಮುಂದೂಡದೇ ಚುನಾವಣೆ ಮಾಡಿದರು. ಆದರೆ ಮಂಗಳೂರು ಮಹಾನಗರಸಭೆಯ ಚುನಾವಣೆಯನ್ನು ನಡೆಸಿಲ್ಲ ಇದಕ್ಕೆ ಸ್ಪಷ್ಟವಾದ ನಿದರ್ಶನ ಏನೆಂದರೆ ಮಂಗಳೂರು ಮಹಾನಗರಸಭೆ ಚುನಾವಣೆ ನಡೆಸಿದರೆ ಕಷ್ಟ ಆಗಬಹುದು ಎನ್ನುವ ಹೆದರಿಕೆ.

ಅಧ್ಯಕ್ಷರು:- ಅವರು ಎಷ್ಟೋ ಚುನಾವಣೆಗಳನ್ನು ನಡೆಸಿದ್ದಾರೆ. ಈ ಒಂದು ಚುನಾವಣೆಯನ್ನು ನಡೆಸಲು ಅವರಿಗೆ ಏಕೆ ಹೆದರಿಕೆ? ಮೊಯ್ದೀನ್‌ರವರೇ ತಾವು ಕುಳಿತುಕೊಳ್ಳಿ. ಇಲ್ಲಿ ಅನೇಕ ವಿಚಾರಗಳು ಇರುವುದರಿಂದ ಆ ಜಿಲ್ಲೆಯ ಎಲ್ಲಾ ಶಾಸಕರನ್ನು ಕರೆದು ಒಂದು ಸಭೆ

ಮಾಡಿ ಅಲ್ಲಿ ಈ ಎಲ್ಲಾ ವಿಷಯಗಳನ್ನು ಚರ್ಚೆ ಮಾಡಲಿಕ್ಕೆ ಹೇಳುತ್ತೇನೆ. ಈಗ ಪ್ರಶ್ನೋತ್ತರ ವೇಳೆ. ಇಲ್ಲಿ ಎಲ್ಲಾ ವಿಷಯಗಳನ್ನು ಚರ್ಚೆ ಮಾಡುತ್ತಾ ಹೋದರೆ ಬೇರೆ ಸದಸ್ಯರ ಪ್ರಶ್ನೆಗಳು ಲ್ಯಾಪ್ಸ್ ಆಗುತ್ತವೆ.

ಶ್ರೀ ಕೆ. ಜಯರಾಮಶೆಟ್ಟಿ:- ಮಾನ್ಯ ಅಧ್ಯಕ್ಷರೇ ತಾವು ನನ್ನ ರಕ್ಷಣೆಗೆ ಬರಬೇಕು.

ಅಧ್ಯಕ್ಷರು:- ತಾವೆಲ್ಲಾ ದಯಮಾಡಿ ಕುಳಿತುಕೊಳ್ಳಬೇಕು. ಮಾನ್ಯ ಮಂತ್ರಿಗಳು ಇನ್ನು 4-5 ದಿವಸದಲ್ಲಿ ತಮ್ಮೆಲ್ಲರನ್ನು ಕರೆದು ಚರ್ಚೆ ಮಾಡುತ್ತಾರೆ.

ಶ್ರೀ ಕೆ. ಜಯರಾಮಶೆಟ್ಟಿ:- ಮಾನ್ಯ ಅಧ್ಯಕ್ಷರೇ, ಚುನಾಯಿತ ನಗರಪಾಲಿಕೆ ಅಸ್ತಿತ್ವದಲ್ಲಿ ಇಲ್ಲದೇ ಇರುವುದರಿಂದ ಕುಡಿಯುವ ನೀರು, ರಸ್ತೆ, ಒಳಚರಂಡಿ ಮುಂತಾದ ಕನಿಷ್ಟ ಸೌಲಭ್ಯಗಳಿಂದ ಸಾರ್ವಜನಿಕರು ವಂಚಿತರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ನಾನು ಪ್ರಶ್ನೆ ಕೇಳಿದರೆ ಇಲ್ಲ ಎಂದು ಹೇಳಿದ್ದಾರೆ. ಆದ್ದರಿಂದ ನಾನು ಸರ್ಕಾರದ ಗಮನಕ್ಕೆ ತರುವುದು ಏನೆಂದರೆ 1987 ರಿಂದ 1994 ರವರೆಗೂ ಮಂಗಳೂರು ಮಹಾನಗರಪಾಲಿಕೆಯವರು ಬೇರೆ ಬೇರೆ ಕಾಮಗಾರಿಗಳ ಕೆಲಸಕ್ಕೆ ಸಂಬಂಧಪಟ್ಟಂತೆ ಗುತ್ತಿಗೆದಾರರಿಗೆ 10 ಕೋಟಿ ರೂಪಾಯಿಗಳ ಪಾವತಿ ಬಾಕಿ ಇದೆ. ಆದ್ದರಿಂದ ಹೊಸ ಕಾಮಗಾರಿಗಳು ಅಲ್ಲಿ ಏನೂ ಆಗಿಲ್ಲ. ಹೊಸ ಕಾಮಗಾರಿಗಳ ಕೆಲಸ ಏನೂ ನಡೆದಿಲ್ಲ ಇದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದರೆ ಯಾವಾಗ ಸರಿ ಮಾಡುತ್ತೀರಿ?

ಶ್ರೀ ಮಿರಾಜುದ್ದೀನ್ ಎನ್ ಪಟೇಲ್:- ಮಾನ್ಯ ಅಧ್ಯಕ್ಷರೇ 10 ಕೋಟಿ ರೂಪಾಯಿಗಳು ಹಣ ದುರುಪಯೋಗ ಆಗಿರುವ ಬಗ್ಗೆ ಜಿಲ್ಲಾಧಿಕಾರಿಗಳು ವಿಚಾರಣೆ ಮಾಡಬೇಕೆಂದು ಆದೇಶ ನೀಡಿದ್ದೇವೆ. ವಿಚಾರಣೆ ಆಗುತ್ತಿದೆ. ವಿಚಾರಣೆ ಮುಗಿದ ಮೇಲೆ ಸರ್ಕಾರಕ್ಕೆ ಜಿಲ್ಲಾಧಿಕಾರಿಗಳು ವರದಿ ಕೊಡುತ್ತಾರೆ.

ಶ್ರೀ ಕುಂಬ್ಳೆ ಸುಂದರರಾವ್:- ಮಾನ್ಯ ಅಧ್ಯಕ್ಷರೇ, ಮಂಗಳೂರು ಮಹಾನಗರಸಭೆಯ ಚುನಾವಣೆಯನ್ನು ಮೂರು ಸಾರಿ ವಿವಿಧ ಕಾರಣಗಳಿಂದ ಮುಂದೂಡಿದ್ದಾರೆ. ಈಗ ಆದಷ್ಟು ಬೇಗ ಮಾಡುತ್ತೇನೆಂದು ಹೇಳಿದರೂ ಮಾಡುತ್ತಾರೋ ಇಲ್ಲವೋ ಎನ್ನುವ ಭಯ ಒಂದು ಸಾರಿ ಎಂ.ಆರ್.ಪಿ.ಎಲ್. ಗಲಾಟೆ ಎಂದು ಹೇಳಿದರು, ಇನ್ನೊಂದು ಸಲ ಮಳೆಗಾಲ ಎಂದು ಹೇಳಿದರು ಮೊನ್ನೆ ಮೊನ್ನೆ ಒಂದು ಸಲ ಮುಂದೂಡಿದರು. ಈಗ ನಾಲ್ಕನೇ ಸಲ ಇನ್ನೊಂದು ಕಾರಣ ಹೇಳಿ ತಡೆಗಟ್ಟುವ ಕೆಲಸ ಆಗುತ್ತದೆ ಅಲ್ಲಿ ಚುನಾಯಿತ ಪ್ರತಿನಿಧಿಗಳು ಇಲ್ಲ.

ಅಧ್ಯಕ್ಷರು:- ಜಿಲ್ಲೆಯ ಎಲ್ಲಾ ಶಾಸಕರನ್ನು ಸಭೆಗೆ ಕರೆದು ತೀರ್ಮಾನ ಮಾಡುತ್ತೇನೆಂದು ಹೇಳಿದ್ದಾರೆ. ಅಲ್ಲಿ ತಾವು ಏನೇನು ಹೇಳಬೇಕೋ ಅದನ್ನೆಲ್ಲಾ ಹೇಳಿ.

ಶ್ರೀಮತಿ ಪ್ರಮೀಳಾ ನೇಸರ್ಗಿ:- ಮಾನ್ಯ ಅಧ್ಯಕ್ಷರೇ, ಹೈಕೋರ್ಟ್‌ನಲ್ಲಿ ಸರ್ಕಾರ ಮಾರ್ಚಿನಲ್ಲಿ ಚುನಾವಣೆ ಮಾಡುತ್ತೇವೆಂದು ಒಂದು ಅಂಡರ್ ಟೇಕಿಂಗ್ ಕೊಟ್ಟಿದ್ದಾರೆ. ಆದರೆ ಇಲ್ಲಿ ಬೇರೆ ಉತ್ತರ ಕೊಡುತ್ತಿದ್ದಾರೆ. ಇದು ಹೇಗೆ ಸಾಧ್ಯ?

ಅಧ್ಯಕ್ಷರು:- ಅವರು ಏನಾದರೂ ಮಾಡಿಕೊಳ್ಳಲಿ ಬಿಡಿ.

ವಿಷಯ:- ಮಾಗಡಿ ಪಟ್ಟಣಕ್ಕೆ ಕುಡಿಯುವ ನೀರು ಯೋಜನೆ.

18(310)

ಶ್ರೀ ಹೆಚ್.ಸಿ. ಬಾಲಕೃಷ್ಣ (ಮಾಗಡಿ):- ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) ಮಾಗಡಿ ಪಟ್ಟಣಕ್ಕೆ ಕುಡಿಯುವ ನೀರಿನ ಸರಬರಾಜಿಗೆ ಸಂಬಂಧಿಸಿದಂತೆ ಮಂಚನಬೆಲೆ ಯೋಜನೆಯ ಕಾಮಗಾರಿಗಳು ಅತ್ಯಂತ ಮಂದಗತಿಯಲ್ಲಿ ನಡೆಯುತ್ತಿರಲು ಕಾರಣಗಳೇನು;

ಆ) ಸದರಿ ಯೋಜನೆ ಯಾವಾಗ ಪೂರ್ಣಗೊಳ್ಳುವುದು?

ಶ್ರೀ ಬಿ.ಎನ್. ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು):-

ಅ) ಮಾಗಡಿ ಮತ್ತು ರಾಮನಗರ ಪಟ್ಟಣಗಳಿಗೆ ಮಂಚನಬೆಲೆ ಜಲಾಶಯವನ್ನು ಮೂಲವಾಗಿಟ್ಟುಕೊಂಡು ಒಂದು ಜಂಟಿ ಯೋಜನೆಯ ಕಾಮಗಾರಿಗಳು ಪ್ರಗತಿಯಲ್ಲಿದ್ದಾಗ, ರಾಮನಗರ ಪಟ್ಟಣಕ್ಕೆ ಜಲಾಶಯದಿಂದ ನೀರನ್ನು ಸರಬರಾಜು ಮಾಡಬಾರದೆಂದು ರೈತರು ನ್ಯಾಯಾಲಯದ ತಡೆಯಾಜ್ಞೆ ತಂದ ಕಾರಣ ಈ ಯೋಜನೆಯು ವಿಳಂಬವಾಗಿತ್ತು. ಆದರೆ ನಂತರ ರಾಮನಗರಕ್ಕೆ ಶಿಂಶಾ ನದಿಯಿಂದ ಯೋಜನೆಯನ್ನು ಮಾಡಿದ್ದು ಮಾಗಡಿ ಪಟ್ಟಣಕ್ಕೆ ಮಾತ್ರ ಈ ಜಲಾಶಯದಿಂದ ನೀರು ಸರಬರಾಜು ಮಾಡುವ ಕಾಮಗಾರಿಗಳು ಪ್ರಗತಿಯಲ್ಲಿವೆ.

ಆ) ಸದರಿ ಯೋಜನೆಯ ಕಾಮಗಾರಿಗಳು ಪ್ರಗತಿಯಲ್ಲಿದ್ದು, ಡಿಸೆಂಬರ್ 1998ರ ವೇಳೆಗೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

ಶ್ರೀ ಹೆಚ್.ಸಿ. ಬಾಲಕೃಷ್ಣ:- ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಈ ವರ್ಷದ ಬಜೆಟ್‌ನಲ್ಲಿ ಎಷ್ಟು ಹಣ ಇಟ್ಟಿದ್ದಾರೆ ಮತ್ತು ಈ ಕಾಮಾಗಾರಿಗೆ ಎಷ್ಟು ಹಣ ಖರ್ಚು ಮಾಡುತ್ತಾರೆ? ಎರಡನೆಯದು ಈ ಕಾಮಗಾರಿ ಕೆಲಸವನ್ನು ಯಾವಾಗ ಪ್ರಾರಂಭ ಮಾಡುತ್ತಾರೆ ಎಂದು ತಿಳಿಸಬೇಕು. ಅಲ್ಲಿದ್ದ ಎಸ್ಕ್ಕವೇಟರ್ಸ್‌ನ್ನು ವಾಪಸ್ಸ್ ಕಳುಹಿಸಿರುವುದರಿಂದ ಅಲ್ಲಿ ಈಗ 20 ಜನ ಮಾತ್ರ ಕೆಲಸ ಮಾಡುತ್ತಿದ್ದಾರೆ. ಅಲ್ಲಿಗೆ ಮತ್ತೆ ಎಸ್ಕ್ಕವೇಟರ್ಸ್‌ನ್ನು ತರಿಸಿ ಆದಷ್ಟು ಬೇಗ ಕೆಲಸ ಮಾಡುತ್ತಿರೋ? ಅಲ್ಲಿ ಟ್ರೀಟ್‌ಮೆಂಟ್ ಪ್ಲಾಂಟ್‌ನ ಕೆಲಸವನ್ನು ಯಾವಾಗ ಪ್ರಾರಂಭ ಮಾಡುತ್ತೀರಿ? ನಾಲ್ಕನೆಯದು ಕುಡಿಯುವ ನೀರಿನ ಯೋಜನೆಯನ್ನು 1998ರ ಡಿಸೆಂಬರ್ ವೇಳೆಗೆ ಮುಗಿಸುತ್ತೇವೆಂದು ಹೇಳಿದ್ದೀರಿ ಅಲ್ಲಿಯವರೆಗೂ ಮಾಗಡಿ ನಗರಕ್ಕೆ ಕುಡಿಯುವ ನೀರನ್ನು ಒದಗಿಸಲು ಬೇರೆ ಯಾವ ಕಾರ್ಯಕ್ರಮ ತೆಗೆದುಕೊಂಡಿದ್ದೀರಿ?

ಶ್ರೀ ಬಿ.ಎನ್. ಬಚ್ಚೇಗೌಡ:- ಮಾನ್ಯ ಅಧ್ಯಕ್ಷರೇ, ಮಾಗಡಿ ಮತ್ತು ರಾಮನಗರಗಳಿಗೆ ಮಂಚನಬೆಲೆ ಜಲಾಶಯವನ್ನು ಮೂಲವಾಗಿಟ್ಟುಕೊಂಡು ಒಂದು ಜಂಟಿ ಯೋಜನೆಯನ್ನು ರೂಪಿಸಿದ್ದೆವು. ಇದರಲ್ಲಿ ರಾಮನಗರಕ್ಕೆ ಕುಡಿಯುವ ನೀರು ಕೊಡಬಾರದು ಎಂದು ಹೇಳಿ ಮಾಗಡಿಯವರು ಹೈಕೋರ್ಟಿಗೆ ಹೋಗಿ ತಡೆಯಾಜ್ಞೆ ತಂದರು. ಈ ಯೋಜನೆಯನ್ನು